[illegible] /138

# ಕನ್ನಡ ಪದ್ಯರತ್ನಾವಳಿ

83,1x
PAI K
Y21
138

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

Recd
30/3/22

ಕರ್ಣಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು
BANGALORE.
KARNATAKA SAHITYA PARISHAT

# ಕನ್ನಡ
# ಪದ್ಯರತ್ನಾವಳಿ.

## (ಪ್ರಥಮ ಭಾಗ)

ಜಿ. ಎನ್. ಲಕ್ಷ್ಮಣ ಪೈ.

ಬೆಲೆ: ೩ ಆಣೆ.

ಸರಸ್ವತೀ ಭಂಡಾರ
ಪರಿಷತ್ತು
ಕವಿತೆ ೨೪
ಕ್ರ. ಸಂ. ೭೦೨೬

Digitized by ROJA MUTHIAH RESEARCH LIBRARY

To.
The Secretary,
Karnatāka Sahitya Parishattu,
Bangalore.

From
G. N. Lakshman Pai,
Saraswati Vilas,
Car street,
Mangalore
S. Kanara
28. 3. /22

3801/9
Gl. No. 860. /138
26.40

# PADYA RATNĀVALY

(PART I.)

FOR THE USE OF SCHOOLS

BY

G. N. LAKSHMAN PAI.

# ಪದ್ಯ ರತ್ನಾವಳಿ

(ಪ್ರಥಮ ಭಾಗ)

ಪಾಠಶಾಲೆಗಳ ಉಪಯೋಗಾರ್ಥವಾಗಿ

ಜಿ. ಎನ್. ಲಕ್ಷ್ಮಣ ಪೈ.,

ಇವರಿಂದ ವಿರಚಿತವಾದುದು.

(All rights reserved by the Author)

1921.

Digitized by ROJA MUTHIAH RESEARCH LIBRARY

PRINTED AT

**M. T. A. SHARADA PRESS**

MANGALORE.

O, 33, 1x PAT P.
N21

## ಎರಡು ಮಾತು.

ಚಿಕ್ಕ ಚಿಕ್ಕ ಪದ್ಯಗಳ ಚಿಕ್ಕದಾದ ಈ ಪುಸ್ತಕಕ್ಕೆ, — ವಾಡಿಕೆಯಂತೆ, — ಒಂದು ಪೀಠಿಕೆಯೂ ಬೇಕಾಗಿದೆಯಂತೆ! ಇರಲಿ, ಅದೂ ಚಿಕ್ಕದಾಗಿರಲಿ.

ವಿದ್ಯಾರ್ಥಿಯು ಬರೆದ ಕವಿತೆಗಳು ವಿದ್ಯಾರ್ಥಿಗಳಲ್ಲಿ ಅಭಿರುಚಿಯನ್ನುಂಟು ಮಾಡುವುದು ಸ್ವಾಭಾವಿಕವು. ಅದರಂತೆ ಇದರೊಳಗಣ ಕವಿತೆಗಳನ್ನು ವಿದ್ಯಾರ್ಥಿಗಳು ಮೆಚ್ಚಿರುವುದೂ ಮೆಚ್ಚಲಿರುವುದೂ ಸುಲಭವೂ ಸಹಜವೂ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ, ಇವುಗಳಲ್ಲಿನ ಹಲವು, ವಿದ್ಯಾರ್ಥಿಗಳಲ್ಲದವರ ಮನಸ್ಸನ್ನೂ ಸೆಳೆದಿವೆ. ಕೆಲವರು ಈ ಪದ್ಯಗಳನ್ನೋದಿ, ತಮ್ಮ ವಿದ್ಯಾರ್ಥಿ ದಶೆಯನ್ನು ಮರಳಿ ಪಡೆದಿರುವಂತೆ ಹೇಳಿರುವರು. ಇದರಿಂದ ಈ ಚಿಕ್ಕ ಪದ್ಯಗಳು ಪ್ರಚಾರಕ್ಕೆ ಬರುವುವೆನ್ನುವುದರಲ್ಲಿ ಸಂಶಯ ಕಾಣದು.

ಸಾಹಿತ್ಯದಲ್ಲಿ, — ಯೋಗ್ಯತೆಯನ್ನು ಕಾಣುವುದು ಸಾಮಾನ್ಯವಾಗಿ ಕಾಣುವವನ ಯೋಗ್ಯತೆಯ ಮೇಲೆಯೆ ಆದರಿಸಿ ಇರುವುದು. ಕನ್ನಡಿಗರು ಅದುಕಾರಣ, ಇದರಲ್ಲಿ ದೋಷಗಳನ್ನೆ ಕಾಣುತಿರಲಾರರೆಂದೂ, ತಮಗೆ ಒಪ್ಪುವುದಾದರೆ, ತಕ್ಕುದಾದ ಆದರವನ್ನು ಈ ಚಿಕ್ಕ ಪುಸ್ತಕಕ್ಕೆ ತೋರುವರೆಂದೂ ನಂಬಲಾಗಿದೆ.

MANGALORE,<br>I—10—1921. **M. N. Kamath.**

## ಅಭಿಪ್ರಾಯಗಳು.

**ಶ್ರೀಯುತ ಎಮ್. ತಿಮ್ಮಪ್ಪಯ್ಯ, ಕಾವ್ಯಾರ್ಣವ,**

ಕನ್ನಡ ಪಂಡಿತರು.

ಸ್ಯೆಂಟ್ ಎಲೋಸಿಯಸ್ ಕಾಲೇಜ್, ಮಂಗಳೂರು.

ಇವರ ಅಭಿಪ್ರಾಯ.

ಪ್ರಿಯರಾದ ಜಿ. ಎನ್. ಲಕ್ಷ್ಮಣಪೈಗಳವರು ಬರೆದ 'ಪದ್ಯರತ್ನಾವಳಿ'ಯ ಪ್ರಥಮ ಭಾಗವನ್ನು ನೋಡಿದೆ. ಕನ್ನಡಸಾಹಿತ್ಯದ ಈ ಪುನರುಜ್ಜೀವನ ಸಮಯದಲ್ಲಿ ಇಂಥ ಪುಸ್ತಕಗಳು ಹೊರಬೀಳುವುದು, ಸಹಜವಿದೆ. ಪುಸ್ತಕವು 4-5 ತರಗತಿಯ ಹುಡುಗರು

Digitized by ROJA MUTHIAH RESEARCH LIBRARY

ಓದಲಿಕ್ಕೂ ಕಲಿಯಲಿಕ್ಕೂ ತಕ್ಕುದಾಗಿದೆ. ಪದ್ಯಗಳ ಶೈಲಿಯು ಸರಳವಾಗಿಯೂ ಅರ್ಥಯುಕ್ತವಾಗಿಯೂ ಇರುವದರಿಂದ ಬಾಯಿಪಾಠಕ್ಕೆ ತಕ್ಕುದು. ಈ ಮಧ್ಯೆ ಕೆಲಕೆಲವು ಕಥೆಗಳೂ ಪದ್ಯರೂಪವಾಗಿ ಮಾರ್ಪುಗೊಂಡುದರಿಂದ ಹುಡುಗರಿಗೆ ಉತ್ಸಾಹಕರವಾಗಿದೆ. ಇಂಥವುಗಳನ್ನು, ಇಲಾಖೆಯವರೂ ಶಾಲಾಧಿಕಾರಿಗಳೂ ಪಠ್ಯಪುಸ್ತಕಗಳನ್ನಾಗಿ ಮಾಡಿದರೆ ಬರೆದವರಿಗೂ ಕಲಿಯುವವರಿಗೂ ಸಹಾಯವಾಗಿ ಒಂದು ಕೆಲಸದಿಂದ ಎರಡು ಫಲದ ಲಾಭವಾದೀತು.

---

### ಶ್ರೀಯುತ ಮುಮ್ನೂರು ಶಿವರಾಮಯ್ಯ,

ಕನ್ನಡ ಪಂಡಿತರು, ಮಿಷನ್ ಹಾಯ್‌ಸ್ಕೂಲ್, ಮಂಗಳೂರು.

ಇವರ ಅಭಿಪ್ರಾಯ.

ಈ ಚಿಕ್ಕ ಪದ್ಯಗಳ ಪುಸ್ತಕವು ಪಠನೆಗೂ ಪಾಠಕ್ಕೂ ಯೋಗ್ಯವಾಗಿದೆ. ಎಳೆಯವರ ಕನ್ನಡ ಗದ್ಯಪಾಠಗಳೊಡನೆ, ಈ ಪದ್ಯಪಾಠಗಳನ್ನು ಮಾಡಿಸುವುದರಿಂದ ಹೆಚ್ಚಿನ ಪ್ರಯೋಜನವಿದೆ ಎನ್ನಲು ಅಡ್ಡಿ ಕಾಣದು ಆದುದರಿಂದ ಪಾಠಶಾಲೆಗಳಲ್ಲಿ ಈ ಪುಸ್ತಕವು ಪ್ರಚಾರಕ್ಕೆ ಬರುವುದೆಂದೂ ಭಾಷಾಭಿಮಾನಿಗಳ ಆಶ್ರಯಕ್ಕೆ ಇದು ಪಾತ್ರವಾಗುವುದೆಂದೂ ನಂಬಿರುವೆನು.

### ಶ್ರೀಯುತ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು,

ಮಂಗಳೂರು.—ಇವರ ಅಭಿಪ್ರಾಯ.

ಶ್ರೀಯುತ ಲಕ್ಷ್ಮಣಕವಿಗಳಿಂದ ರಚಿತವಾದ ಈ ಹೃದಯಂಗಮವಾದ ಪದ್ಯಗಳು ಸರಳವಾದ ಶೈಲಿಯುಳ್ಳದ್ದಾಗಿ ರಸಭರಿತವಾಗಿ ನೀತಿಭೋದಕವಾಗಿವೆ. ಪುಸ್ತಕದಲ್ಲಿ ಕೊಟ್ಟಿರುವ ಕ್ಲಿಷ್ಟಶಬ್ದಾರ್ಥಗಳು ನವೀನ ಪಾಠಕರಿಗೆ ಅತ್ಯುಪಕಾರಕವಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಬಾಲಕ ಬಾಲಿಕೆಯರ ಕಂಠವನ್ನಲಂಕರಿಸಲು ಅತೀ ಯೋಗ್ಯವಾದ ಈ **'ಪದ್ಯರತ್ನಾವಳಿ'**ಯನ್ನು ಕನ್ನಡಿಗರು ಪರಮಾದರದಿಂದ ಸ್ವೀಕರಿಸಿ ಆನಂದಿಸುವರೆಂದು ಪರಿಪೂರ್ಣ ಭರವಸೆಯಿದೆ. ಭಗವದನುಗ್ರಹದಿಂದ ಶ್ರೀ॥ ಪೈಗಳವರು ಇನ್ನೂ ಅನೇಕ ಕಾವ್ಯರತ್ನಗಳನ್ನೊದಗಿಸುವಂತೆ ಭಾಷಾಭಿಮಾನಿಗಳಾದ ಕನ್ನಡಿಗರೆಲ್ಲರೂ ಅವರನ್ನು ಸರ್ವವಿಧದಿಂದಲೂ ಪ್ರೋತ್ಸಾಹಿಸುವರೆಂದು ನಂಬಿರುವೆನು.

---

**ಸೂಚನೆ:**—ಎಳಯವರಿಗೆ ಕಷ್ಟವೆಂದು ತೋರಬಹುದಾದ ಪದಗಳ ಅರ್ಥವನ್ನು ಈ ಪುಸ್ತಕದ ಕೊನೆಯ ಪುಟಗಳಲ್ಲಿ, **ಕ್ಲಿಷ್ಟಪದಗಳ ಅರ್ಥ**ವೆಂಬ ವಿಭಾಗದಲ್ಲಿ, ಕೊಟ್ಟಿದೆ.

ಜಿ. ಎಸ್. ಎಲ್. ಪೈ.

## ಅನುಕ್ರಮಣಿಕೆ.


| ಪಾಠ. | | ಪುಟ. |
|---|---|---|
| 1 | ಶಾಲಾ ಪ್ರಾರ್ಥನೆ ... ... ... ... .. | 1 |
| 2 | ಕೋಪ ... ... ... ... ... ... | 2 |
| 3 | ಉದಯರಾಗ ... ... ... ... ... ... | 2 |
| 4 | ಮಡಿವಾಳನೂ ಮೊಸಳೆಯೂ ... ... ... ... | 3 |
| 5 | ದಾನ ... .. ... ... ... ... ... | 4 |
| 6 | ದಾರಿಗನೂ ಆಲದ ಮರವೂ ... ... ... ... | 5 |
| 7 | ಗುರು ಪ್ರಾರ್ಥನೆ ... ... ... ... ... | 6 |
| 8 | ಹುಡುಗರೂ ಕೆರೆಯೊಳಗಿನ ಕಪ್ಪೆಗಳೂ ... ... ... | 7 |
| 9 | ಭಿಕ್ಷಾಟನೆ. ... ... ... ... ... ... | 8 |
| 10 | ಹುಡುಗನೂ ಕಳ್ಳನೂ ... ... ... ... ... | 10 |
| 11 | ದೀಪಾವಳಿಯ ಪದಗಳು ... ... ... ... ... | 13 |
| 12 | ಕಾಗೆಯೂ ಹೂಜಿಯೂ ... ... ... ... ... | 14 |
| 13 | ಸಂಘರಚನೆ ... ... ... ... ... ... | 15 |
| 14 | ನರಿಯೂ ದ್ರಾಕ್ಷೆಯ ಹಣ್ಣೂ ... ... ... .. | 16 |
| 15 | ಹುಲಿಯೂ ಬ್ರಾಹ್ಮಣನೂ ... ... ... ... ... | 17 |
| 16 | ಹಳೆಯ ಖಡ್ಗದ ಪಶ್ಚಾತ್ತಾಪ ... ... ... ... | 19 |
| 17 | ಚಿಕ್ಕಿನ ಠಕ್ಕು ಉಪದೇಶ ... .. ... ... | 20 |
| 18 | ಕನ್ನಡ ಮಾತೆ. ... ... ... ... ... | 22 |
| 19 | ಗಿಳಿಯೂ ಅರಸನೂ ... ... ... ... ... | 22 |
| 20 | ದೇವರಿಗೆ ಯಾರು ಮೇಲಾಗಿರುವರು? ... ... ... | 24 |
| 21 | ಕ್ಲಿಷ್ಟಪದಗಳ ಅರ್ಥ ... ... ... ... ... | 26 |


Digitized by ROJA MUTHIAH RESEARCH LIBRARY

☞ ಈ ಪುಸ್ತಕವನ್ನು ಓದುವುದಕ್ಕಾರಂಭಿಸುವ ಮೊದಲು,
ದೋಷಗಳನ್ನು ಸರಿಪಡಿಸಿಕೊಳ್ಳಿರಿ !

## ಅಚ್ಚುದೋಷಗಳ ತಿದ್ದುಪಡಿ.

ಪಾಠ 2. ಕೋಪ—ಈ ಕವಿತೆಯ ಹನ್ನೊಂದನೆಯ ಚರಣದಲ್ಲಿರುವ 'ಕುಡಿಕನಂದನನುಚಿತ' ಎಂಬುದು **ಕುಡಿಕನಂದದನುಚಿತ** ಎಂದಾಗಬೇಕು.

ಪಾಠ 10. ಹುಡುಗನೂ ಕಳ್ಳನೂ—ಈ ಕವಿತೆಯ ಮೂವತ್ತಮೂರನೆಯ ಚರಣದಲ್ಲಿರುವ 'ತಸ್ಕನು' ಎಂಬುದು **ತಸ್ಕರನು** ಎಂದಾಗಬೇಕು.

ಪಾಠ 17. ಬೆಕ್ಕಿನ ಠಕ್ಕು ಉಪದೇಶ—ಈ ಕವಿತೆಯ ಇಪ್ಪತ್ತಾರನೆಯ ಚರಣದಲ್ಲಿರುವ 'ಭಾಗ್ಯಃ' ಎಂಬುದು **ಭಾಗ್ಯ?** ಎಂದಾಗಬೇಕು.

# ಪದ್ಯ ರತ್ನಾವಳಿ.

## 1. ಶಾಲಾಪ್ರಾರ್ಥನೆ.

(ರಾಗ: ಮುಖಾರಿ — ಝಂಪೆತಾಳ)

ಈಶ ಸದ್ಗುಣಭೂಷನೇ ಕಾವುದೈ ।
ಲೇಸಿನಿಂ ವಿದ್ಯಾರ್ಥಿಗಳ ನಮ್ಮ ಸತತ ॥ ಪಲ್ಲ ॥

ದಿನದಿನದೊಳಾಟ ಪಾಠಗಳಲ್ಲಿ ಬಲು ವೃದ್ಧಿ ।
ಯನು ಹೊಂದಿ, ಪಡೆದು ತಿಳಿವಿನ ಬೆಳಕನು, ॥
ಘನವಾದ ನಡತೆಯಿಂ ಸನ್ಮಾನ್ಯರಾಗುತ್ತ, ।
ಮನದಿ ತೋಷವನಾಂತು ಬಾಳುವಂತೆ— ॥ ೧ ॥

ಗುರುಭಕ್ತಿ, ನಮ್ರತೆ, ದಯಾಗುಣಗಳಿಂದ ಮುಂ ।
ದ್ವರಿದು ಸುಖಸಂತೋಷವನು ತಾಳುತೆ, ॥
ನಿರತ ನಮ್ಮಾ ಪರೀಕ್ಷೆಯಲಿ ತೇರ್ಗಡೆಹೊಂದಿ ।
ಭರದಿ ಮೇಲ್ ತರಗತಿಗೆ ಸಾಗಿ ಪೋಪಂತೆ— ॥

ಪರಿಪರಿಯ ವಿಷಯಗಳ ವಿಜ್ಞಾನವನು ತಿಳಿದು ।
ಪರಮ ಸದ್ಧರ್ಮ ಪಥವನು ಮೀರದೆ, ॥
ಪರಮೇಶ! ಭಕ್ತಿಯಲಿ ನಿನ್ನ ಭಜಿಸುತೆ, ತಳೆದು ।
ಗರುವಿಕೆಯ ಲೋಕದಲಿ ಶೋಭಿಪಂತೆ— ॥ ೩ ॥

## 2. ಕೋಪ.

|| ಚೌಪದಿ ||

ಕೋಪದಿಂ ದೂರ ನಡೆ! ಬೇಡದರ ಸಂಗ. |
ಪಾಪಕೂಪದೊಳಿಳಿಸಿ ಕೊಡುವುದತಿ ಭಂಗ ||
ಆಪದಗಳನು ತರಿಸಿ, ತಾಪದೊಳಗಿರಿಸಿ, |
ಪಾಪಿಯೆಂಬುವ ಬಿರುದನೀವುದೈ ಹರಸಿ || ೧ ||

ಠಕ್ಕು ರಕ್ಕಸನ ತೆರ ತನ್ನ ಬಲೆಯೊಳಗೆ |
ಸಿಕ್ಕಿಹರ ಬಿಡದಧೋಗತಿಯೊಳಗೆ, ಕೆಳಗೆ, ||
ಧಿಕ್ಕರಿಸಿ ಹಾಕುವುದು ಸಂಶಯುವ ಬಿಟ್ಟು; |
ಅಕ್ಕಟಾ! ಇದರೊಡನೆ ಬೇಡ ಒಕ್ಕಟ್ಟು! || ೨ ||

ತನುವನದು ಕೆಡಿಸುವುದು, ಮನವ ಕೆಡಿಸುವುದು |
ಧನವ ಕೆಡಿಸುವುದಿನ್ನು ಘನವ ಕೆಡಿಸುವುದು. ||
ಘನ ಕುಡಿಕನಂದನನುಚಿತಗಳನು ನಡೆಸಿ, |
ಜನರ ಪರಿಹಾಸ್ಯಕಡೆ ಮಾಡಿಪುದು ಕೆಡಿಸಿ. || ೩ ||

ಮುನಿಸಿಂತು ಮಾರಿ, ಭೀಕರ ಮೋಸಕಾರಿ |
ಮನದ ಶಾಂತಿಯು ತೆಗೆದು ಕೊಡುವುದೈ ಭಾರಿ ||
ಕನಿಕರವೆ ಮನಕೆ, ಗೆಳೆಯನೆ! ಕೇಳು—ಮುಖ್ಯ |
ಅನುದಿನವು ತೊರೆಯದನು! ಬೇಡ ನಿಜ ಸಖ್ಯ! || ೪ ||

## 3. ಉದಯ ರಾಗ.

ಭಾರತೀಯನೆ! ನಿದ್ದೆ ಸಾಕಿನ್ನು! ಅನುಚಿತದ |
ಬೋರುಗುಡಿಯನು ತೆಗೆಯುತೆದ್ದೇಳೆಲೊ! ||
ಧೀರ ಗುಣವಂತ! ತೂಕಡಿಕೆಯನು ಬಿಡದಿರುವೆ! |
ತೋರುವುದೆ ನ್ಯಾಯವೆಂದಿದು ನಿನಗೆ ಹಾ! || ೧ ||



ಭರತಮಾತೆಯ ಪುತ್ರನೆಂದೆನಿಸಿ ನೀನಿಂತು |
ಮರೆದು ಕಣ್ಮುಚ್ಚಿ ನಿದ್ದಿಸುತಿರುವುದೇ? ||
ಹೊರಗೆ ಹಕ್ಕಿಗಳು ಚಿಲಿಪಿಲಿ ರವವ ಮಾಡುತ್ತ |
ತಿರುಗಿ ನಿನಗೆಚ್ಚರಿಸುತಿಹವು ನೋಡು. || ೨ ||

ಜಲಜಸಖನಗೊ! ನಿನ್ನನಿಣಿಕಿ ನೋಡುವ ನಗುತ |
ಚೆಲುವಾದ ಮುಂಬಿಸಿಲ ಹೂಡಿರುವನು. ||
ಬಲು ಶುದ್ಧ ಮನದಿಂದಲೆದ್ದೇಳು!—ಸತ್ಕಾರ್ಯ |
ಗಳ ಗೈದು ಲೋಕದಲಿ ಸುಖದಿ ಮೆರೆಯೈ! || ೩ ||

## 4. ಮಡಿವಾಳನೂ ಮೊಸಳೆಯೂ.

|| ಭೋಗ ಷಟ್ಪದಿ ||

ಪುರದ ಜನರ ಬಟ್ಟೆಯೊಗೆದು |
ಬರುವ ಹಣದಿ ತನ್ನ ಹೊಟ್ಟೆ |
ಹೊರೆಯುತಿದ್ದ ಅಗಸನೊಬ್ಬನೊಂದು ದಿನದಲಿ ||
ಕೆರೆಗೆ ಹೋಗಿ, ವಸ್ತ್ರವೊಗೆಯು |
ತಿರಲು ಹಾಸ್ಯಕೆಂದು ಬರಿದೆ, |
"ಅರರೆ! ಮೊಸಳೆ ಬಂತು, ಮೊಸಳೆ!" ಎಂದು ಕೂಗಿದ. || ೧ ||

ಮೊರೆಯ ಕೇಳಿ ನೆರೆಯ ಜನರು |
ಕರುಣಗೊಂಡು, ನೆಗಳೆಯನ್ನು |
ತರಿಯಲೆಂದು ದೊಣ್ಣೆ ಕತ್ತಿಗಳನು ಹಿಡಿಯುತ್ತ
ಕೆರೆಯ ಸೇರಿ ನೋಡೆ, ಮೊಸಳೆ |
ಯಿರಲೆ ಇಲ್ಲ; ಕೈಯ ತಟ್ಟೆ |
ಹರುಷದಿಂದ ನಗುವ ರಜಕನನ್ನು ಕಂಡರು. || ೨ ||

Digitized by ROJA MUTHIAH RESEARCH LIBRARY

"ಬಾಳ ಸುಳ್ಳುಗಾರನಿವನು ।
ಕೇಳುತಿವನ ಕೂಗನಿಂದು ।
ಪಾಲಿಸಲ್ಕೆ ಬಂದು ನಾವು ಮೋಸಹೋದೆವು! ॥

ಖೂಳನನ್ನು ನಂಬಬೇಡಿ; ।
ಹೇಳ್ವ ಸಟೆಯನೆಂ"ದು ಕೋಪ ।
ತಾಳಿ ಹಳಿಯುತವನ, ತಮ್ಮ ಮನೆಗೆ ನಡೆದರು. ॥ ೩ ॥

ಕಳೆಯೆ ಸ್ವಲ್ಪ ಸಮಯ, ಸರಸಿ ।
ಯೊಳಗೆ ವಾಸಿಸಿದ್ದ ನೆಗಳೆ ।
ಸುಳಿಯೆ ಮೇಲೆ,—"ಮೊಸಳೆ ಬಂತು, ಮೊಸಳೆ!" ಎನ್ನುತ ॥

ಛಲದೊಳೊದರೆ, ಮೊದಲಿನಂತೆ ।
ಅಳುತಿರುವನು ಬರಿದೆಯೆಂದು ।
ತಿಳಿದು ಮನದಿ ಜನರು ಸುಮ್ಮಗಿರಲು, ಅಗಸನ ॥ ೪ ॥

ಕಾಲ ಹಿಡಿದು ಮೊಸಳೆ ಕೆರೆಯ ।
ಆಳವಾದ ತಳವ ಸೇರೆ, ।
ಗೋಳನಿಟ್ಟು ಮರುಗಿ ತನ್ನ ಪ್ರಾಣ ಬಿಟ್ಟನು. ॥

ಕೇಳಿ! "ಸುಳ್ಳನಾಡುವವನು ।
ಮೇಲೆನಿಸುವ ಸತ್ಯವನ್ನು ।
ಹೇಳೆ ಕೂಡ ನಂಬದಿಹರು!" ಸತ್ಯವೀ ನುಡಿ. ॥ ೫ ॥

---

## 5. ದಾನ.

॥ ಚೌಪದಿ ॥

ದಾನ ಮಾಡದೆ ಬರಿದೆ ಸಂಗ್ರಹಿಸುವರ್ಥ ।
ಕಾನನದ ಬೆಳದಿಂಗಳಂತೆ ಬಲು ವ್ಯರ್ಥ



ಜೀನತನದಲಿ ಹಣವನೇಕೆ ಗಳಿಸಿಡುವೆ? ।
ಮಾನವನೆ! ನೋಡು! ಕೊನೆಗತಿ ದುಃಖಪಡುವೆ. ॥ ೧ ॥

ಆಶಾಂಗನೆಯ ಮರುಳು ಬಲೆಗೆ ನೀ ಸಿಲುಕಿ ।
ಘಾಸಿಯಾದೆಯ ಲೋಭಿ, ದಾನಕ್ಕೆ ಅಳುಕಿ! ॥
ಕಾಸು ಕೊಡುವುದಕೆ ಮರುಗುವೆ ಬಹಳ ತೆರದಿ; ।
ಲೇಸಲ್ಲ!—ದಾನದಾ ಮಹಿಮೆ ತಿಳಿ ಭರದಿ. ॥ ೨ ॥

ಈವ ವಿತ್ತವು ಪೋಪುದೆಂದೆಣಿಸ ಬೇಡಾ ।
ಭಾವಿಸಲು ಮುಕ್ತಿಯನು ಕೊಡುವುದದು ಮೂಢಾ! ॥
ಸಾವಡಸಿ ಇಹಲೋಕವನು ಬಿಟ್ಟ ಮೇಲೆ, ।
ಕಾವುದದು ಮುಂದೆ ಕೊಡುವುದು ಸೌಖ್ಯಲೀಲೆ. ॥ ೩ ॥

ಆದಕಾರಣದಿಂದ ಲೋಭವನ್ನುಳಿದು, ।
ಮೇದಿನಿಯೊಳಗೆ ಬಾಳು ದಾನವನು ಗೈದು! ॥
ಸಾಧಿಸೈ ಸಕಲರಿಗೆ ಸುಖಕೊಡಲು ನಿತ್ಯ! ।
ಮೋದದಲಿ ಮೆರೆವೆ ನೀ ಇಹಪರದಿ ಸತ್ಯ! ॥ ೪ ॥

---

## 6. ದಾರಿಗನೂ ಆಲದಮರವೂ.

॥ ವೀರಚೌಪದಿ ॥

"ಅರರೆ! ಏನಿದು?—ಬಹಳ ದೊಡ್ಡದಾಗಿಹ ಗೋಳಿ!
ಮರಕೆ ಕೆಂಬಣ್ಣದಾ ಸಣ್ಣ ಹಣ್ಣುಗಳು! ॥
ಪರಿಕಿಸಲು ಕೇಸರಿಯ ಹೊಟ್ಟೆಯಿಂ ಸಣ್ಣಿರಿವೆ ।
ಹೊರಬೀಳುವುದು ಸರಿಯೆ?—ತಿಳಿಯೆ ತರವಲ್ಲಂ." ॥ ೧ ॥

"ಸರಿಯಾಗಿ ಯೋಚಿಸದೆ ದೇವರೀ ಕೊರತೆಯನು ।
ವಿರಚಿಸಿರುವನದೇಕೆ?" ಎಂದು ದಾರಿಗನು ॥

Digitized by ROJA MUTHIAH RESEARCH LIBRARY

ಮರದಡಿಯ ನೆರಳಿನಲಿ ಕುಳಿತು ನೆನೆನೆನೆದು ದೇ ।
ವರನು ಜರೆಯುತಲಿದ್ದ ತನ್ನ ಮನದೊಳಗೆ. ‖ ೨ ‖

ಅನಿತರೊಳೆ ತರುವಿಂದ ಚಿಕ್ಕ ಹಣ್ಣೊಂದು ಪಥಿ ।
ಕನ ತಲೆಯ ಮೇಲ್ ಬೀಳೆ, "ಅಯ್ಯಪ್ಪ! ನಾನು ‖
ಘನವಾದ ವೇದನೆಯ ಸಹಿಸೆನ್ನೈ! ಜಗದೀಶ ।
ನನು ದೂರಿದೆನು ವ್ಯರ್ಥವಾಗಿ ಮೌಢ್ಯದಲಿ." ‖ ೩ ‖

"ಈ ತೆರದಿ ಸಣ್ಣದಾಗಿರುವುದೀ ಕಾಯಿಯಾ ।
ಯಾತನೆಯನಿದ ತಾಳಲಾರೆ! ಮರದಂತೆ ‖
ಖ್ಯಾತಿಯಿಂದೀ ಫಲವು ದೊಡ್ಡದಾಗಿರುತಿರಲು, ।
ಮೃತ್ಯುವನು ಸೇರುತಿದ್ದೆನು ನಿಜವಿದೆ"ಂದಂ. ‖ ೪ ‖

ಅದುಕಾರಣದಿ ದೇವರಲಿ ಕೊರತೆಯನು ಹುಡುಕು ।
ವುದು ಮನುಜನಿಗೆ ಯೋಗ್ಯವಲ್ಲ! ಸಕಲವನು ‖
ಪದುಳದಲಿ ಸೃಷ್ಟಿಸುತ ಪೊರೆವವಗೆ, ಚದುರತೆಯ ।
ಹದನವೇಂ ಗೊತ್ತಿಲ್ಲದಿಹುದೆ ಯೋಚಿಸಲು? ‖ ೫ ‖

---

## 7. ಗುರು ಪ್ರಾರ್ಥನೆ.

‖ ರಾಗ: ಕಾಂಬೋದಿ — ಝುಂಪೆತಾಳ ‖

ದಯದಿ ಆಶೀರ್ವಾದ ಕರುಣಿಸೈ ನಮಗೆ ।
ಭಯನಿವಾರಕ ವರದ ಪರಮ ಸದ್ಗುರುವೇ! ‖ ಪಲ್ಲ ‖

ವಿದ್ಯೆಯಲಿ ಪಾಂಡಿತ್ಯ ಪಡೆಯುತ್ತೆ, ನಾವೀಗ ।
ಹೊದ್ದಿರುವ ಮೂಢತೆಯ ಕಳಕೊಳ್ಳುತೆ; ‖
ಬುದ್ಧಿಜ್ಞಾನಗಳಿಂ ಸಮಾಜದಾ ಸೇವೆಯನು ।
ಶ್ರದ್ಧೆಯಿಂದೆಸಗುವಾ ತೆರದಿ ಭರದಿ. ‖ ೧ ‖



ಸಂಘದಲಿ ಸಕಲರಿಗೆ ಹಿತವೆನಿಪ ಸತ್ಕಾರ್ಯ ।
ವಂ ಗೆಯ್ಯುವಂತೆಮ್ಮ ವರ ಧರ್ಮಕೆ ‖
ಭಂಗ ಬರಲಿಕೆ ಬಿಡದೆ, ಮಂಗಳವ ಬರಿಸುತ್ತ, ।
ಮಂಗಳಾತ್ಮಕ! ಶಾಂತತೆಯಲಿ ಬಾಳ್ವಂತೆ. ‖ ೨ ‖

---

## 8. ಹುಡುಗರೂ ಕೆರೆಯೊಳಗಿನ ಕಪ್ಪೆಗಳೂ.

### [ನಟನೆಯ ಕಥೆ.]

ರಾಗ: ಜಂಜೋಟಿ — ಅಷ್ಟತಾಳ.

(ಧಾಟಿ: — "ಕಾಂತೆ ಕೇಳು ಪ್ರಮಾದವ ಪೇಳುವೆ")

**ರಾಮು:**—(ಒಂದು ಕಲ್ಲನ್ನೆಸೆದು)
ನೋಡು ನೋಡು ಕೃಷ್ಣನೆ, ಕಪ್ಪೆ ಹಾರ್ವುದು. ‖ ಪಲ್ಲ ‖

ನಾನೆಸೆದಾ ಕಲ್ಲು । ಚೆನ್ನಾಗಿ ತಗಲುತೆ ।
ಬನ್ನಬಡುವುದದು, ಭಾಪುರೆ! ‖ ೧ ‖

**ಕೃಷ್ಣ:**—(ಒಂದು ಕಲ್ಲನ್ನೆಸೆದು)
ನೋಡು ನೋಡು ರಾಮನೆ, ಬಲು ಚೋದ್ಯವ. ‖ ಪಲ್ಲ ‖

ಕಪ್ಪೆಯ ಗುಂಪಿಗೆ । ತಪ್ಪದೆ ಹೊಡೆದೆನು ‖
ಧೊಪ್ಪನೆ ಕಲ್ಲೊಂದ ತ್ವರ್ಯದಿ. ‖ ೧ ‖

ತಡೆಯಲಾರದೆ ನನ್ನ । ಹೊಡೆತದ ನೋವನ್ನು ‖
ಕಡು ಬಾಧೆ ಪಡುವವು, ಓಡ್ವವು. ‖ ೨ ‖

**ರಾಮು:**—ಕಪ್ಪೆಯಾಟವನಾಡ । ಲಿಪ್ಪುದು ಸೋಜಿಗ ।
ಬಪ್ಪುದು ಸಂತೋಷ ಯೋಚಿಸೆ, ।
ನೋಡು ನೋಡು ಕೃಷ್ಣನೆ ಕಪ್ಪೆ ಹಾರ್ವುದು. ‖ ೧ ‖

Digitized by ROJA MUTHIAH RESEARCH LIBRARY

(ಕೆರೆಯೊಳಗಿನ ಮುದಿ ಕಪ್ಪೆಯೊಂದು ಇಂತೆಂದಿತು):—

ಮಾನ್ಯ ಬಾಲರೆ, ಯೋಚಿಸಿ ನೋಡಿರಿ. ‖ ಪಲ್ಲ ‖

ಬಗೆಯಲು ಬೆಕ್ಕಿನ । ಸೊಗಸಾದ ಆಟವು ‖
ತೆಗೆವುದು ಮೂಷಿಕ ಪ್ರಾಣವ. ‖ ೧ ‖

ಆ ತೆರದಲಿ ನಿಮ್ಮ । ಪ್ರೀತಿಯಾಟವು ನಮ್ಮ ‖
ಘಾತಿಸುವುದು; ನೋವ ಸೈಸೆವೈ. ‖ ೨ ‖

ಮೋದದ ಸಮಯದಿ । ಬಾಧಿಸಿ ಪರರನು ‖
ಖೇದಗೊಳ್ಳಿಪುದೇನು ಯೋಗ್ಯವೆ? ‖ ೩ ‖

---

## 9. ಭಿಕ್ಷಾಟನೆ.

‖ ವೀರಚೌಪದಿ ‖

ಶನಿವಾರ ಸೋಮವಾರಂಗಳನು ತಮ್ಮ ಶುಭ ।
ದಿನಗಳೆಂದೆಣಿಸುತಾ ದಿನಗಳಲಿ ಬಂದು, ‖
ಜನರೊಳಗೆ ಬಹು ತರದ ವೇಷಧಾರಿಗಳಾಗಿ ।
ಧನವೆಂದು ಬೇಡುವರು ಬಾಗಿಲಲಿ ನಿಂದು. ‖ ೧ ‖

ವಾಮಕರದಲ್ಲಿ ತಂಬೂರಿಯನು ಹಿಡಿಯುತ್ತೆ, ।
'ಟೂಮ ಟೂಮ್' ಎಂಬ ದನಿಗೈದು ಬಾರಿಸುತೆ; ‖
ನೇಮದಿಂ ಹಾಡಿ "ಬೆಕ್ಕಿನ ಕೊಂದರಾರೆ"ನುತೆ ।
"ಹೇ ಮಹಾ ಜನರೆ! ಹಣವನು ಕೊಡಿರೆ"ನುವರು. ‖ ೨ ‖

ಒಂದು ಕೈಯೊಳು ಗಂಟೆ ಒಂದು ಕೈಯೊಳು ಶಂಖ ।
"ಮಂದಾರಗಿರಿಯ ಗೋವಿಂದ ಸಲಹೆ"ನುತ ‖
ಬಂದು ಬಾಗಿಲಿಗೆ 'ಭೂಮ್' ಎಂದು ಶಂಖವನೂದಿ, ।
ಮಂದಿ ಬೇಡುತ್ತಿಹುದು ಮಾನವನು ತೊರೆದು. ‖ ೩ ‖



ಮಂಗಣ್ಣನನು ತಂದು ಅಂಗಳದೊಳಾಡಿಸುತೆ, ।
"ರಂಗಣ್ಣ! ಲಾಗ ಹಾಕೋ" ಎಂದು ಹಾಡಿ; ‖
"ಮಂಗ ರಂಗಣ್ಣನಿಗೆ ಕೊಡಿ ಹಣವೆ"ನುತೆ ಬೇಡಿ ।
ನುಂಗುವರು ಮಂಗನಿಂ ಪಡೆದುದನು ಕೆಲರು. ‖ ೪ ‖

ತಂದು ಬಸವಣ್ಣನನು ಸಿಂಗರಿಸಿ ಬಹು ವಿಧದಿ ।
ಮುಂದುಗಡೆಯಲಿ ಡೋಲ 'ಡುಮ್, ಡುಮ್ಮ' ಬಡೆದು, ‖
"ಮುಂದಾಗಿ, ರಾಮಪ್ಪ! ನಿನ್ನ ಯಜಮಾನರನು ।
ವಂದಿಸೆ"ನ್ನುತೆ ಕುಣಿಸಿ ಕೆಲರು ಬೇಡುವರು. ‖ ೫ ‖

ಹಾಲಕ್ಕಿ ಹೆಸರಿಂದ 'ಕಟ್‌ಕಟ'ನೆ ಗಿಡಿಬಿಡಿಯ ।
ಮೇಲ್ಮೇಲೆ ಬಡಿದು, "ಶಕುನವ ಬಲ್ಲೆವೆ"ಂದು ‖
ಹೇಳುತ್ತೆ "ಜಯವಾಗುತೈತೆ" ಎನ್ನುತೆ ಸಟೆಯ, ।
ಬಾಳ ಹಣವನು ಪಡೆವರಲ್ತೆ ಸೊಗಸಾಗಿ. ‖ ೬ ‖

ಬೂದಿಯನು ಬಳೆದು, ಕೌಪೀನವನು ಧರಿಸುತ್ತೆ, ।
"ಮಾಧವಾ, ರಾಮ, ರಾಮೆ"ಂದೆನುತೆ ಜಪಿಸಿ; ‖
ಸಾಧುವೆಂಬೋಲ್ ನಟಿಸಿ ಬಟ್ಟಲನು ಹಿಡಿದು, ಸ ।
ಮ್ಮೋದದಲಿ ಹಣ ಗಳಿಪರಿಂತಿನ್ನು ಕೆಲರು. ‖ ೭ ‖

"ಸರಿಯಿರಲು ಕೈಕಾಲುಗಳು ನೀವು ಬೇಡುವುದು ।
ತರವಲ್ಲವೆ"ನಲು ನೆವ ಹೇಳುವರು,—"ಹಿಂದೆ ‖
ನೆರೆದಿದ್ದ ಅಜ್ಜಂದಿರೆಲ್ಲ ಭಿಕ್ಷ್ಯವನೆತ್ತಿ ।
ಹೊರೆದರೈ ಹೊಟ್ಟೆಯನು, ಅನುಸರಿಪೆವದನು." ‖ ೮ ‖

ಕರಚರಣಗಳು ಬಲಿಯೆ, ಪಾಲುಮಾರಿಕೆಯಿಂದ ।
ತಿರಿಕೆಯೋ ವೃತ್ತಿಯೆಂದೆಸಗಿ ಯಾಚಿಸುವ ‖

Digitized by ROJA MUTHIAH RESEARCH LIBRARY

ತಿರುಕರಾಲಸ್ಯ ಬೆಳಸಲು ಸಂಚಕಾರವನು |
ಸುರಿವ ದಾನಿಯದಾವ ದೇಶಾಭಿಮಾನಿ? || ೯ ||

---

## 10. ಹುಡುಗನೂ ಕಳ್ಳನೂ.

|| ಗೋವಿನಕಥೆ ಮಟ್ಟು ||

ಗುಂಡನೆಂಬುವ ಧೀರ ಹುಡುಗನು |
ಕಂಡು ಬರುತಿಹ ಕಳ್ಳನಾ, ||
ಕೊಂಡುಕೂಗನು, ಬಳಿಯ ಬಾವಿಯ|
ದಂಡೆಯಲಿ ತಾ ಕುಳಿತನು. || ೧ ||

ಬರಿದೆ ಮಿಡಿದನು ಕಣ್ಣನೀರನು |
ಒರಸಿಕೊಂಡನು ಕರದಲಿ. ||
ತಿರುಗಿ ಕೂಗಿದ, ಮರಳಿ ಚೀರಿದ |
ಮರುಕ ತೋರುವ ತೆರದಲಿ. || ೨ ||

ಚೋರ ಬಂದನು; ನಿಂತುಕೊಂಡನು |
ಚೀರ್ವ ಬಾಲನ ಕಂಡನು. ||
"ಪೋರನಿವನನು ವಂಚಿಸಲಿದುವೆ |
ಭಾರಿ ಸಮಯವು" ಎಂದನು. || ೩ ||

"ಕಂದ! ಅಳುತಿಹುದೇಕೆ? ಹೇಳೆಲೊ |
ಬಂದ ದುಗುಡವನೆನ್ನೊಳು. ||
ಕುಂದಿ ಕುಳಿತಿಹುದೇಕೆ? ಏನಾ |
ಯ್ತೆ"ಂದು ಮೆಲ್ಲನೆ ಕೇಳ್ದನು. || ೪ ||

"ಕೂಗದಿರೆಲವೊ! ಬಂದ ತಾಪವ |
ನೀಗುವೆನು! ನೀನಳುಕದೆ. ||



ಬೇಗ ಹೇಳ್, ಹೇಳ್." ಎನಲು ಗುಂಡನು |
ಬಾಗಿಬಿದ್ದನು ಧರೆಯಲಿ. || ೫ ||

"ಮನೆಗೆ ಹೋಗುವುದೆಂತು?—ಹೋಗಲು |
ಜನಕನೇ ಗೈಯುವನೊಹಾ! ||
ಕನಕದಾ ಬಳೆಯೊಂದು ಬಾವಿಯೊ |
ಳೆಣಿಸೆ ಬಿದ್ದಿಹುದೆ"ಂದನು. || ೬ ||

ಎಂದ ಮಾತನು ಕೇಳಿ, ಖಳನಾ |
ನಂದ ತಳೆದನು ತನ್ನಲಿ, ||
ಮುಂದೆ ಹಿತಚಿಂತಕನ ತೆರ ಬಳಿ |
ಸೆಂದು ತಾನಿಂತೆಂದನು. || ೭ ||

"ಅಳುತಿಹುದು ಅದಕೇನು ಬಾಲನೆ?—|
ಅಳುಕದಿರು ನಾನೀಗಲೇ ||
ಇಳಿದು ಕೋಪದಿ ಬಳೆಯ ಹುಡುಕುತ |
ಬಳಿಕ ಕೊಡುವೆನು ನಿನಗೆಯೆ." || ೮ ||

ನುಡಿಯುತೀಪರಿ ತಸ್ಕನು ನಿಜ |
ಉಡುಪುಗಳ ತೆಗೆದೆಲ್ಲವ, ||
ಒಡನೆ ಕೌಪೀನವನು ಧರಿಸುತ, |
ಹುಡುಗನೊಡನಿಂತೆಂದನು. || ೯ ||

"ಎಲವೊ ಕಂದನೆ! ನನ್ನ ಪೋಷಕ |
ಗಳನು ಕಾದಿರು! ಜೋಕೆಯ ||
ಕಳೆಯದಿರು! ನಾ ಮೇಲೆ ಬರುವೆನು |
ಬಳೆಯೊಡನೆ ಬಲು ತ್ವರಿತದಿ." || [illegible] ||

ಬಳಿಕ ಕುಹಕಿಯು ಬಾವಿಗಿಳಿಯಲು |
ತಳೆದ ಹರುಷವ ಗುಂಡನು. ||

Digitized by ROJA MUTHIAH RESEARCH LIBRARY

"ಭಳಿರೆ! ಠಕ್ಕನ ಠಕ್ಕಿಸುತೆ ನಾ ।
ಬಲು ವಿನೋದವ ನೋಡುವೆ." ॥ ೧೧ ॥

ಇಂತು ಯೋಚಿಸಿ ಬಟ್ಟೆಯವುಗಳ ।
ನಾಂತು ತನ್ನಯ ಕೈಯಲಿ, ॥
ಮುಂತೆ ಹರಿದನು ಮನೆಗೆ ನೆಟ್ಟಗೆ ।
ಸಂತಸದಿ ಸಲೆ ನಗುತಲಿ. ॥ ೧೨ ॥

ಇತ್ತ ಕೂಪದಿ ಹುಡುಕಿ ಹುಡುಕುತ ।
ಸೊತ್ತ ಕಾಣದೆ ಕಳ್ಳನು. ॥
ಹತ್ತಿ ಬಂದನು ಮೇಲೆ ಬಲು ಬೇ ।
ಸತ್ತು ಕುಗ್ಗುತ ರೋಷದಿ. ॥ ೧೩ ॥

ಹೇಳಲೇನದ್ಭುತವ?—ಕಳ್ಳನು ।
ಬಾಲಕನ ತಾ ಕಾಣದೆ. ॥
ಮೇಲೆ ನಿಜ ವಸ್ತ್ರಗಳ ಕಾಣದೆ ।
ಬಾಳ ಬೇಸರ ಪಟ್ಟನು. ॥ ೧೪ ॥

"ಅರರೆ! ವಂಚಕರೊಳಗೆ ಮಿಂಚಿದ ।
ಪುರುಷ ನಾನೆಂದಿದ್ದೆನು. ॥
ಪರಿಕಿಸಲು ಹುಲು ಬಾಲನಿಂದಲೆ ।
ಹಿರಿದು ವಂಚಿತನಾದೆನು". ॥ ೧೫ ॥

"ಕಂದನೆಂದೆಣಿಸಿದ್ದೆ!—ಅವನಿಂ ।
ಒಂದು ಪಾಠವ ಕಲಿತೆನು". ॥
ಎಂದು ತನ್ನೊಳು ನುಡಿದು ನಾಚಿಕೆ ।
ಯಿಂದ ಮನೆಗವ ಸರಿದನು. ॥ ೧೬ ॥

---



## 11. ದೀಪಾವಳಿಯ ಪದಗಳು.

॥ ವೀರಚೌಪದಿ ॥

ಶ್ರೀಮಂತ ಗುಣವಂತರೇ! ನಿಮಗೆ ವಂದಿಪೆವು ।
ಗ್ರಾಮದಾ ಬಾಲಕರು ನಾವು ಸಂತಸದಿ. ॥
ನೇಮದೊಲು ಬಂದಿಹುದು ದೀಪಾವಳಿಯ ಹಬ್ಬ ।
ದಾ ಮಹೋತ್ಸವವು ನಮಗೆಲ್ಲರಿಗೆ, ನೋಡಿ. ॥ ೧ ॥

ಆಕಾಶದಲಿ ತಾರೆಗಳು ಬಲು ಮೆರೆಯುವಂತೆ ।
ಲೋಕದೊಳನೇಕ ದೀಪಗಳು ಶೋಭಿಪವು! ॥
ಶೋಕವಿರಹಿತರಾಗಿ ಜನರೆಲ್ಲರಾ ತೆರದಿ ।
ಮಾ ಕರುಣೆಯಿಂದೊಪ್ಪುತಿರಲಿ ದಿನದಿನವು! ॥ ೨ ॥

ಸಿರಿಯ ದಯೆಯಿಂದ ನೀವಿರುವವರು ನೋಡುತಿರೆ ।
ಸರಸತಿ ಕಟಾಕ್ಷದಿಂದಿರುವವರು ನಾವು. ॥
ಪರಿಕಿಸಲು ಅತ್ತೆಯನ್ನಗಲಿ ಸುಖದಲಿ ಸೊಸೆಯು ।
ಇರಬಲ್ಲಳೇ?—ನೀವೆ ಯೋಚಿಸಿರಿ ಮುನ್ನ. ॥ ೩ ॥

ವಿದ್ಯೆಯೇ ಮಾನವಗೆ ಮಾನವೀವುತೆ ಸರ್ವ ।
ಸಿದ್ಧಿಯನು ತರುವ ಸುರವೃಕ್ಷವದರಿಂದ ॥
ಶ್ರದ್ಧೆಯಿಂದದನು ಗಳಿಸುವ ಬಾಲರಲಿ ದಯವ ।
ಹೊದ್ದಿ ಸಾಹಾಯ್ಯ ಮಾಡಿರಿ ಪ್ರೀತಿಯಿಂದ. ॥ ೪ ॥

ಕಾಲಕಾಲಕ್ಕೆ ಮಳೆಗರೆದು ಸಸಿ ವೃದ್ಧಿಸುತೆ ।
ಭೂಲಲನೆ ಶೋಭೆಯಾಂತಿರಲಿ ಸಂಪದದಿ! ॥
ಮೇಳವಿಸಿ ಪುತ್ರ ಪೌತ್ರರನು ಬುಧರೆನಿಸುತ್ತೆ, ।
ಬಾಳುತಿರಲೈ ಭಾರತೀಯರುಂ ಮುದದಿ! ॥ ೫ ॥

Digitized by ROJA MUTHIAH RESEARCH LIBRARY

## 12. ಕಾಗೆಯೂ ಹೂಜಿಯೂ.

|| ವೀರಚೌಪದಿ ||

ಪೊಡವಿಯಲಿ ತಿರುತಿರುಗಿ ಬಡವಾಗಿ ಬಹಳ ನೀ |
ರಡಿಕೆಯಿಂ ಕೊರಕೊರಗಿರುವ ಕಾಗೆಯೊಂದು, ||
ಕಡೆಗೆ ಕಂಡಿತು ಬಳಿಯ ತೋಟದಾ ನಡುವಿನಲಿ |
ಬೆಡಗಿನಿಂದೆಸೆಯುತಿಹ ಹೂಜಿಯೊಂದನ್ನು. || ೧ ||

ಭೂರಿ ಸಂತೋಷವನ್ನಾಂತು ಹಾರಿತು ಮುಂದೆ |
ನೀರು ಕುಡಿಯಲು ವೇಗದಿಂದದರ ಬಳಿಗೆ ||
ಚಾರು ಸೊಬಗೇನೆಂಬೆ?—ತಳದೊಳಿದ್ದಿತು ಕೊಂಚ |
ವಾರಿಯದು ಕೊಕ್ಕಿಗೆಟಕದು ಯತ್ನಿಸಲ್ಕೆ. || ೨ ||

"ಅರರೆ! ಬಲು ತೃಷೆಯಿಂದ ಹರಣ ಪೋಪುದು! ತಾಪ |
ದುರಿಯನ್ನು ಸೈಸೆನಯ್ಯಯ್ಯೊ, ಜಗದೀಶಾ! ||
ಕರಕೆ ಸೋಂಕದು ಜಲವೆ"ನುತ ಪಾತ್ರೆಯನು ಚಲದಿ |
ತಿರುವಿ ಮಗಚಲು ಯತ್ನಿಸಿತು ರೋಷದಿಂದ. || ೩ ||

ಬಗೆಬಗೆಯ ಶಕ್ತಿಯುಪಯೋಗಿಸಿದರೇಂ?—ಭರಣಿ |
ಮಗಚಿ ಬೀಳದಿರೆ, ನೆರೆ ತಾಳ್ಮೆಯನು ವಹಿಸಿ, ||
"ಬಗೆಯೆ ನೀರಿರುವಲ್ಲಿ ಕೊಕ್ಕು ತಗಲದ ಕತದಿ |
ಸಿಗಲು ಬೇಕಾ ನೀರು ಕೊಕ್ಕು ಇರುವಲ್ಲಿ." || ೪ ||

ಎಂದು ತನ್ನೊಳಗೆ ಯೋಚಿಸುತ ಕೆಲ ಕಲ್ಲುಗಳ |
ಒಂದುಗೂಡಿಸಿತಾಗ ನಿಜ ಮೂತಿಯಿಂದ. ||
ಒಂದೊಂದೆ ಕಲ್ಲ ತೆಗೆಯುತ ಹೂಜಿಯಲಿ ಹಾಕೆ, |
ಮುಂದೆ ಮೇಲಕೆ ಬಂತು ನೀರು ತಾನಾಗಿ. || ೫ ||



ವಾಯಸಮದಾಗ ಬೇಕಾದ ಜಲವನು ಕುಡಿದು |
ಬಾಯಾರಿಕೆಯ ಬಾಧೆ ಕೊನೆಗಾಣಿಸುತ್ತ, ||
ವಾಯುವಿನೊಳಗೆ ಹಾರಿಹೋಯ್ತು! ವರ ಸ್ಥಿರಯತ್ನ |
ಶ್ರೇಯಸ್ಸಿನಾ ಮೂಲವೆಂದು ನೀ ತಿಳಿಯೈ! || ೬ ||

---

## 13. ಸಂಘರಚನೆ.

|| ವೀರಚೌಪದಿ ||

ಕಲಿಯುಗದಿ ಸಂಘದಿಂ ಶಕ್ತಿ ಬಹುದೆಂಬುದನು |
ತಿಳಿದು ಆಧುನಿಕ ಜನರೆಲ್ಲರೊಂದಾಗಿ, ||
ಬಲು ಸಾಹಸದಲಿ ಕರ್ತವ್ಯವನ್ನೆಸಗೆ, ಸಲೆ |
ಬಲುಮೆ ಬರುವುದು; ಮನೋರಥವು ಸಿದ್ಧಿಪುದು. || ೧ ||

ನೆರೆಯುವಗೆ ಸಂಭವಿಸಿದಾಪದವು ತನ್ನದೆಂ |
ದರಿತು ಕೈಗೊಟ್ಟು, ಕಾಪಾಡುವುದವನನು. ||
ಭರದಿ ಯೋಚಿಪುದು ನಿಜ ಬಂಧುಗಳೆನುತ್ತೆ ಸಕ |
ಲರು; ಬಳಿಕ ಸಹಕರಿಪುದೋರ್ವನೋರ್ವನನು. || ೨ ||

ಪಾಮರರನೆಬ್ಬಿಪುದು ಬುದ್ಧಿವಂತರು, ಸಕಲ |
ತಾಮಸರನುದ್ಧರಿಸಬೇಕು ಗುಣಯುತರು. ||
ನೇಮದಿಂ ನಾಡಿನಾ ಮೇಲ್ಮೆಯನು ಕೋರಿ ಸು |
ಕ್ಷೇಮದಿಂದನುದಿನವು ನೆಮ್ಮದಿಯೊಳಿಹುದು. || ೩ ||

ಮಾಡುವಾ ಕಾರ್ಯವನು ಮನವಿಟ್ಟೆಸಗುತೆ ಮುಂ |
ದೋಡುವುದು ವಿಜಯವನೆ ಪಡೆಯಲೆಂದೆನುತ. ||
ದೂಡುವುದು ಬಂದ ಕಷ್ಟಗಳ, ನಿಜ ಧರ್ಮಕ್ಕೆ |
ಕೇಡು ಬಾರದ ತೆರದಿ ನೋಡುವುದು ಸತತ. || ೪ ||

Digitized by ROJA MUTHIAH RESEARCH LIBRARY

ಒಕ್ಕಟ್ಟಿನಿಂದಿರುವ ಸ್ಥಳದಿ ಬಲದೇವತೆಯು |
ಹೊಕ್ಕು ನಿಲಯುವನು ಮಾಡುವಳು ಅವಸರದಿ. ||
ಅಕ್ಕರೆಯೊಳಮಲ ಶುಭವನೆ ಬೀರುವಳು, ನರನೆ! |
ಲೆಕ್ಕಿಸುತ ದೇಶದಲಿ ಸಹಕಾರಿಯಾಗು! || ೫ ||

## 14. ನರಿಯೂ ದ್ರಾಕ್ಷೆಯ ಹಣ್ಣೂ.

|| ಭಾಮಿನಿ ಷಟ್ಪದಿ. ||

ಅಡವಿಯೊಳಗಲೆದಾಡಿ ಬೇಟೆಯ |
ಹುಡುಹುಡುಕಿ ನರಿಯೊಂದು ತಿನಿಸನು |
ಪಡೆಯುದಿರೆ ಬಳಿಯೊಳಿಹ ಹಳ್ಳಿಗೆ ಸಾರಿ ಬಲು ಬಳಲಿ ||
ಕಡೆಗೆ ಕಂಡಿತು ದ್ರಾಕ್ಷೆ ಹಣ್ಣಿನ |
ಳಿಡಿಬು ಮೆರೆಯುವ ಬಳ್ಳಿಯೊಂದನು |
ಕಡು ಹರುಷದಿಂ ಹಿಗ್ಗಿ ಬಗೆಯೋಳ್ ಬಗೆದುದಿಂತೆಂದು || ೧ ||

'ಭಾಪು! ಬಡವನು ಕೊಪ್ಪರಿಗೆಯನು |
ತಾ ಪಡೆವವೊಲು ಹಸಿದ ಹೊಟ್ಟೆಯ |
ತಾಪದಲಿ ನೊಂದಿರುವೆನಗೆ ಸವಿಯೂಟ ದೊರೆಯಿತಲಾ! ||
ಈ ಫಲಗಳನು ತಿಂದು ಮನದಣಿ |
ವಾ ಪರಿಯ ನೋಡುವೆನು! ಬಲು ಸಂ |
ತಾಪವನು ಪರಿಹರಿಸಿ ಮರಳುವೆನೆಂದು ತನ್ನೊಳಗೆ || ೨ ||

ಬಗೆದು ನರಿಯಾಲತೆಯ ಸಾರ್ದುದು |
ಮಿಗೆ ಹರುಷದಿಂ ದ್ರಾಕ್ಷೆ ಫಲಗಳ |
ತೆಗೆಯೆ ನೆಗೆದುದು! ಸಿಗದು ತಳಕುನ್ನತದೊಳಿದ್ದುದರಿಂ ||
ಮೊಗವು ಕಂದಿತು; ನಗುವು ನಂದಿತು |
ಚಿಗಿಚಿಗಿದು ಹಲಬಾರಿ ನೆಲದಲಿ |
ಮಗುಚಿ ಬೀಳಲು, ಕೋಪದಲಿ ದ್ರಾಕ್ಷೆಯನು ತೆಗಳಿದುದು || ೩ ||



"ಆರು ಬಯಸುವರಯ್ಯ ದ್ರಾಕ್ಷೆಯ? |
ತೀರ ಹುಳಿ! ಛೀ! ಹಾಳು ಹಣ್ಣಿದು! |
ಭಾರಿ ಹಸಿದಿಹ ವೇಳೆಯಾದರು ಮುಟ್ಟೆ ನಾನಿದನು. ||

ಸಾರಗೆಡಿಪುದು ನಾಲಗೆಯ, ಹೆ |
ಮ್ಮಾರಿ! ನೋವನು ತರುವುದೊಡಲಿಗೆ |
ಸಾರುವೆನು! ಮುಂದದರ ಹೆಸರೆತ್ತುವುದು ಲೇಸಲ್ಲ"! || ೪ |

ನುಡಿದು ರೋಷದೊಳಾಂತು ಹೆಮ್ಮೆಯು |
ಬಿಡದೆ ಅಲ್ಲಿಂದೋಡಿ ಬೇಟೆಯ |
ಹುಡುಕಲಾರಂಭಿಸಿತು ತವಕದೊಳಂದು ನರಿಯೊಂದು ||
ಬಿಡದೆ ಯತ್ನಿಸಿ ಫಲವು ಸಿಗದಿರೆ |
ಸಡಗರದಿ ತೆಗಳುವರು, ಹೆರರಿಂ |
ಪಡುವ ದುಃಖವ ತೋರಿಸರು ನರಿಯಂತೆ ಜಗದೊಳಗೆ. || ೫ ||

## 15. ಹುಲಿಯೂ ಬ್ರಾಹ್ಮಣನೂ.

|| ಚೌಪದಿ ||

"ನಾ ಮಣಿವೆ, ಬ್ರಾಹ್ಮಣೋತ್ತಮನೆ! ನೋಡಿತ್ತ! |
ಈ ಮಹಾ ಬೋನಿನಲಿ ಸಿಲುಕಿಹೆನು ನಾಥ! ||
ನೀ ಮರುಕಗೊಂಡಿದರ ಬಾಗಿಲನು ತೆಗೆಯೆ |
ಹೇಮವನು ಕೊಡುವೆ ನಾ ಜೀವನದ ಬಗೆಯೆ." || ೧ ||

ಎಂದು ಪಂಜರದೊಳಗಣಿಂದ ಹುಲಿ ದ್ವಿಜನ |
ವಂದಿಸುತೆ ಬಿಡಿಸೆಂದು ಬೇಡುತಿರೆ ತನ್ನ; ||
ನೊಂದು ಮನದೊಳಗವನು ಕಾರುಣ್ಯದೋರಿ, |
ಮುಂದನೆಣಿಸದೆ ತೆಗೆದ ಬಾಗಿಲನು ಸಾರಿ. || ೨ ||



Digitized by ROJA MUTHIAH RESEARCH LIBRARY

ಹಾರಿದನು ವ್ಯಾಘ್ರನಾ ಹಾರುವನ ಮೇಲೆ, ।
"ಭಾರಿ ಹಸಿವಿಂದ ಬಳಲುತ್ತಿರುವ ವೇಳೆ ॥
ಸೇರಿರುವ ನಿನ್ನ ತಿಂದೆನ್ನ ಹಸಿವೆಯನು ।
ತೀರಿಸುವೆ! ಬಳಿಕ ಸಲಿಸುವೆನು ಬಯಕೆಯನು." ॥ ೩ ॥

"ಏನಿದೇನಿದು ಹುಲಿಯೆ! ನಾನೊಂದು ತಿಳಿಯೆ! ।
ಪ್ರಾಣವನು ಕಾಯ್ದವನೊಳಪಕಾರ ಸರಿಯೆ? ॥
ಆ ನಿನ್ನ ಚಿನ್ನವನು ಬಯಸೆನ್ನೈ!—ನನ್ನ ।
ಸಾನುರಾಗದಿ ಪೋಗೊಳಿಸು! ಮರೆಯೆ ನಿನ್ನ." ॥ ೪ ॥

"ಅರರೆ! ಮರುಗದಿರು ನಾ ಬಿಡೆ ನಿನ್ನ ನಿಜದಿ!— ।
ಅರಸುವರೆ ಕಾಲ್ಗೆಡವಿದಾ ಲತೆಯ ವನದಿ? ॥
ದೊರೆತಿರುವೆ ಭಾಗ್ಯದಿಂದೆನಗಿಂದು ನೀನು. ।
ತೊರೆದುಹೋಗಲು ಬರಿದೆ ಮನ ಬರುವುದೇನು?" ॥ ೫ ॥

"ಪರಹಿತವ ವಿರಚಿಪುದೆ ಪುರುಷಾರ್ಥವೆಂದು ।
ಅರಿತು ಬಿಡಿಸಿದೆ ನಿನ್ನ ಬಂಧನವನಿಂದು. ॥
ಮರೆಯುತೆಲ್ಲವನೀಗ ಬಂಧಿಸುತೆ ನನ್ನ ।
ಮರಣವನು ಬಗೆಯುವುದು ತರವೆ?—ಸಂಪನ್ನ!" ॥ ೬ ॥

"ನಾ ಮಾಡಿದುಪಕಾರ ಸ್ಮರಿಸುತ್ತ ನಿನ್ನ ।
ನೇಮದೊಲು ನನ್ನ ನೀ ವಧಿಸದಿರು, ಮುನ್ನ ॥
ನೇಮದಿಂ ದಯೆಗೆ ಪ್ರತಿಯಾಗಿ ದಯೆಯನ್ನ ।
ಪ್ರೇಮದಿಂ ಕರುಣಿಸೈ! ಎಲವೊ ಹುಲಿರನ್ನ!" ॥ ೭ ॥

"ಕರುಣ ತೋರುವುದೆಮ್ಮ ಕುಲಧರ್ಮವಲ್ಲಾ! ।
ದೊರೆತುದನು ಬಿಡದೆ ತಿಂಬುದೆ ನೇಮ, ಖುಳಾ! ॥



ಒರೆಯದಿರು ಸಕಲ ನೀತಿಯ ಬಲ್ಲೆ ಬಲ್ಲೆ! ।
ತರಿದು ನಿನ್ನನು ತಿನದೆ ನಾ ಹೋಗಲೊಲ್ಲೆ." ॥ ೮ ॥

ಎನ್ನುತಾ ಬಡ ವೈದಿಕನ ಹಿಡಿಯುತಂದು ।
ಮುನ್ನ ಹುಲಿ ಬೊಬ್ಬಿರಿಯೆ, ಕೇಳಿ ನರಿಯೊಂದು ॥
ಅಣ್ಣ ತಬ್ಬಲಿಯ ಕಾಪಾಡಬೇಕೆಂದು ।
ತನ್ನ ತಾನೇ ಬಂದುದಲ್ಲಿ; ಬಳಿಸಂದು, ॥ ೯ ॥

"ಎರಗುವೆನು ಹುಲಿರಾಯ! ಚೋದ್ಯ ಸಂಗತಿಯ ।
ಕರುಣೆಯಿಂದರುಹಿದರೆ ತೀರಿಸುವೆ ನ್ಯಾಯ. ॥
ಚರನೊಳುಸುರೆ"ನಲು, ಹುಲಿಯೊರೆಯೆ ಸಕಲವನು, ।
"ಅರಸ! ಪ್ರತ್ಯಕ್ಷ ಕಾಣದೆ ತಿಳಿಯೆ ನಾನು." ॥ ೧೦ ॥

"ಶೀಘ್ರದಲೆ ತೋರಿಸುವೆ"ನೆಂದು ಮುದದಿಂದ ।
ವ್ಯಾಘ್ರನಾ ಪಂಜರವ ಹೊಗಲು, ಹೊರಗಿಂದ ॥
ಜಾಗ್ರತೆಯೊಳಾ ದ್ವಿಜನು ಕದವನ್ನು ಜಡಲು ।
ಉಗ್ರಹುಲಿ ಪೂರ್ವ ಗತಿಯಲಿ ಮರುಗುತಿರಲು; ॥ ೧೧ ॥

ತಟ್ಟನೇ ಭೂಸುರನು ಹೇಳ್ದ,—"ಎಲೊ ನಿನ್ನ ।
ಕಷ್ಟದಿಂ ಬಿಡಿಸಲೆತ್ನಿಸಿ ಪಡೆದ ಬನ್ನ. ॥
ಸೃಷ್ಟಿಯಲಿ ಸಾರುವೆನು "ದುಷ್ಟಜನರನ್ನು ।
ಬಿಟ್ಟಿರುವನೇ ಸುಖಿಯು ನಿಜವೆಂಬುದನ್ನು." ॥ ೧೨ ॥

---

## 16. ಹಳೆಯ ಖಡ್ಗದ ಪಶ್ಚಾತ್ತಾಪ.

॥ ಕುಸುಮ ಷಟ್ಪದಿ ॥

ಭೂತಳದಿ ನಾ ಬಹಳ ।
ಘಾತುಕದ ಜೀವನವ ।
ನೇತಕ್ಕೆ ಸಾಗಿಸಿದೆನೋ? ಕೆಟ್ಟೆನು! ॥

Digitized by ROJA MUTHIAH RESEARCH LIBRARY

ಖ್ಯಾತಿಯನು ನನ್ನೊಡೆಯ ।
ನೇ ತಳೆಯಬೇಕೆಂದು ।
ನೀತಿಯೆಣಿಸದೆ ಕೊಂದೆನನಿಬರನು, ಹಾ! ॥ ೧ ॥

ಕಾರುಣ್ಯದೋರದತಿ ।
ಕ್ರೂರತನದಲಿ ವೈರಿ ।
ವೀರರನು ತರಿದುರುಳಿಸಿದೆನು ಧರೆಗೆ. ॥
ಆ ರಕುತವಾಂತು ಗಂ ।
ಭೀರತೆಯ ನಟಿಸುತ್ತ ।
ತಾರುಣ್ಯವನು ಸವೆಯಿಸಿದೆನು ಕೊಲೆಯೋಳ್. ॥ ೨ ॥

ಮಸಣದಾ ಹೂವಂತೆ ।
ಹಸನುಗೆಟ್ಟಿತು ನನ್ನ ।
ಎಸೆವ ಬಾಳಿಕೆಯಕಟ! ದೇವ ದೇವಾ! ॥
ಕುಸಿದು ಫಲವೇನು?—ಸಂ ।
ತಸದಿ ದೇವರ ನುತಿಯ ।
ನೆಸಗುವೆನು! ನರನೆ, ತವ ಗತಿಯ ನೋಡೈ! ॥ ೪ ॥

## 17. ಬೆಕ್ಕಿನ ಠಕ್ಕು ಉಪದೇಶ.

॥ ವೀರಚೌಪದಿ. ॥

ನಾರಿ, ಮನೆಯೊಡತಿ ಹೊರಹೊರಟುದನು ನೋಡಿ ಹದ ।
ಮೀರಿ ತೃಪ್ತಿಯನಾಂತ ಬೆಕ್ಕೊಂದು ಬೇಗ ॥
ಸಾರಿ ಹಾಲಿನ ಪಾತ್ರೆಯಿರುವೆಡೆಗೆ, ನಿಜ ಮುಖವ ।
ತೂರಿತದರೊಳಗೆ ಸಂತಸದಿ ಅವಸರದಿ. ॥ ೧ ॥

ಮಡಕೆಯಾ ಬಾಯಿ ಬಲು ಸಣ್ಣಗಿದ್ದುದರಿಂದ ।
ಕಡು ತಾಪಕೊಳಗಾದುದೊಡನೆ ಮಾರ್ಜಾಲಂ. ॥



'ದಡ ಬಡೆ'ನ್ನುವ ಶಬ್ದಗೇಳಿ, 'ಶೂ ಶೂ' ಎಂದು ।
ಬಿಡದೆ ಯಜಮಾನಿ ತಾನೊಳಹೊಕ್ಕಳಾಗ. ॥ ೨ ॥

ಒಡತಿಯ ಬರವನರಿತು ಬೆಕ್ಕು ಬಲು ಭಯದಿಂದ ।
ನಡುನಡುಗಿ ಮುಂದೋಡಿತಾಗ ರಭಸದಲಿ. ॥
ಗಡಿಗೆಯದು ಕದಕೆ ತಾಗಲು ಕಂಠವನ್ನುಳಿದು ।
ಒಡೆದು ಹೋಯಿತು ಚೂರು ಚೂರಾಗಿ, ಅಕಟಾ! ॥ ೩ ॥

ಕಂಧರದಿ ಮಣ್ಣ ಮಡಕೆಯ ಮಾಲೆಯಿರೆ ಕಂಡು ।
ಕಂದಿತಾ ಬೆಕ್ಕು ತನ್ನೊಳಗೆ ಮರುಮರುಗಿ. ॥
"ಇಂದೇಕೆ ಬಂದಿತೀ ದುಃಸ್ಥಿತಿಯು ನನಗೆ ಹಾ! ।
ಮುಂದೇನು ನಾ ಮಾಡಲಯ್ಯಯ್ಯೊ ವಿಧಿಯೆ!" ॥ ೪ ॥
"ಬಗೆಯೆ ಸಂಬಂಧಿಕರು ನನ್ನಯೀ ಹೇಸಿಗೆಯ ।
ಬಗೆಯ ಬಳೆಯನ್ನು ನೋಡುತೆ, ನಗೆಯ ತಾಳಿ ॥
ಬಗೆಬಗೆಯ ವಿಧದಿಂದ ತೆಗಳುತ್ತ, ಕುಲದಿಂದ ।

ತೆಗೆದು ಹೊರದೂಡರೇ?—ಮಾಡರೇ ಚಾಳಿ." ॥ ೫ ॥
ಎಂದು ಯೋಚಿಸುತಿರಲು, ಮೂಷಿಕಾರಿಗಳ ಗುಂ ।
ಪೊಂದು ನಡೆತಂದಿರಲು; ತಾಳ್ಮೆಯನು ವಹಿಸಿ, ॥
"ಬಂಧುಗಳೆ, ನಗಬೇಡಿ! ಹೊಂದಲಿಕೆ ಪುಣ್ಯವನು ।
ಇಂದು ಮಾಲೆಯನಿದನು ಧರಿಸಿರುವೆ ಸಹಿಸಿ." ॥ ೬ ॥

"ಇಲಿಗಡಣವನ್ನು ತರಿದತುಲ ಪಾಪವನೆಮ್ಮ ।
ತಲೆಯ ಮೇಲ್ ತಳೆದು, ಬಾಳುವುದೇನು ಭಾಗ್ಯಃ ॥
ನಲವಿಂದ ಕಾಶಿಯಾತ್ರೆಗೆ ಹೋಗಿ ದುಷ್ಕಾರ್ಯ ।
ಗಳ ಪಾತಕವ[?]ಕಳೆದು ಬಾಳುವುದು ಯೋಗ್ಯ." ॥ ೭ ॥

Digitized by ROJA MUTHIAH RESEARCH LIBRARY

"ಪಾಪ ತಾಪಗಳೆಲ್ಲ ನೀಗುತ್ತೆ ಸಂತೋಷ |
ಕೂಪದಲಿ ಸುಖಿಸಲಿಚ್ಛಿಪ ಜನರು ನಯದಿ ||
ಈ ಪರಿಯ ಮಣ್ಣಿಂದ ರಚಿಸಿರುವ ಬಳೆಯನಾ |
ಕ್ಷೇಪವಿಲ್ಲದೆ ಧರಿಸಬೇಕು ತ್ವರಿತದಲಿ." || ೮ ||

**ಈ ರೀತಿಯಲ್ಲಿ ಆ ಬೆಕ್ಕು ಉಪದೇಶ ಮಾಡುತ್ತಿರಲು, ಮಾರ್ಜಾಲ ಸಮೂಹದಲ್ಲಿದ್ದ ಒಂದು ಮುದಿ ಬೆಕ್ಕು ಹೀಗೆಂದಿತು:—**

"ನಿನ್ನ ಈ ಠಕ್ಕು ಭಾಷಣವನ್ನು ಮಾಡದಿರು ! |
ಖಿನ್ನನಾಗಿಹೆ ಹಾಳು ಮಡಕೆಯಾ ಕೊರಳು ||
ನಿನ್ನ ಕೊರಳಿಗೆ ಸಿಲುಕಿದುದರಿಂದ ಎಂಬುದನು |
ಮುನ್ನ ನಾವರಿತಿಹೆವು! ಬೇಗನದ ತೆಗೆಯೈ." || ೯ ||

---

## 18. ಕನ್ನಡ ಮಾತೆ.

|| ಭಾಮಿನಿ ||

ಹೆತ್ತು ಸಲಹಿದ ಮಾತೆಯನು ತ್ಯಜಿ |
ಸುತ್ತ ಜರೆವುದು ಸರಿಯೆ? ಅನ್ನವ |
ನಿತ್ತು ರಕ್ಷಿಸಿದೊಡೆಯಗೆರಡನು ಬಗೆಯುವುದು ಥರವೆ? ||
ಉತ್ತಮವು ತಾನೆನಿಪ ವಿದ್ಯೆಯ |
ನಿತ್ತ ಗುರುವನು ಹಳಿವುದುಚಿತವೆ? |
ಮತ್ತೆ ಮುಳಿವುದು ಹಿತವೆ—ಕನ್ನಡಮಾತೆ ದಾತೆಯನೂ? || ೧ ||

---

## 19. ಗಿಳಿಯೂ ಅರಸನೂ.

|| ವೀರ ಚೌಪದಿ ||

ಆನಂದಶರ್ಮನೆಂಬುವ ದೀನ ಹಾರುವನು |
ಸಾನುರಾಗದೊಳೊಂದು ಗಿಳಿಯ ಪೊರೆದಿದ್ದಂ. ||

Digitized by ROJA MUTHIAH RESEARCH LIBRARY



ಮಾನವನ ತೆರದಿ "ಸಂದೇಹವೇನದಕೆ"ಂಬ |
ಈ ನುಡಿಯನಾಡಲಿಕೆ ಬೋಧಿಸಿದನದಕೆ. || ೧ ||

ಕುಲದ ಸ್ವಭಾವದಂದದಿ ಕಲಿಯಿತಾ ಮಾತ |
ಕೆಲಗಾಲದೊಳಗೆ ಹೇಳುವುದಕ್ಕೆ ಗಿಳಿಯು. ||
ನಲವಿಂದ "ಸಂದೇಹವೇನದಕೆ" ಎಂದು ತಾ |
ನುಲಿಯುವುದು ಏನೊರೆದರೂ ಬಳಿಯ ಜನರು. || ೨ ||

"ನಿನ್ನ ಪಡೆದುದರಿಂದ ಧನ್ಯನಾದೆನು ನಾನು |
ಚೆನ್ನಾದ ಸೌಭಾಗ್ಯರನ್ನ ನೀನೆ"ಂದು ||
ಉನ್ನತಾನಂದದಲಿ ಆನಂದನೊರೆಯಲದು !
ತನ್ನ ಕಟ್ಟಳೆಯ ಅನುಸರಿಸಿದುದು ಮುದದಿ. || ೩ ||

ಭೂರಿ ತೃಪ್ತಿಯನಾಂತು ಭೂಸುರನು ತವಕನಲಿ |
ಸಾರಿದನು ರಾಜಮಂದಿರಕೆ ಗಿಳಿಯೊಡನೆ. ||
ಧಾರುಣೀಶನು ನೋಡುತವನ ಸೋಜಿಗಗೊಂಡು, |
"ಹಾರುವನೆ! ನೀನೇಕೆ ಬಂದಿರುವೆ?" ಎಂದಂ. || ೪ ||

"ದೇವ, ಲಾಲಿಸು ! ತಂದಿರುವೆನು ನುಡಿವಕ್ಕಿಯನು; |
ಭಾವಿಸಲು ಸೊಗಸಾದ ಭಾಷೆಯರಿತಿಹುದು. ||
ಸಾವಧಾನದಿ ಪರಿಕಿಸುತೆ ಕೊಂಡುಕೊಳ್ಳುವುದು |
ಸಾವಿರ ಹಣವನಿತ್ತು" ಎಂದನಾನಂದಂ. || ೫ ||

ಬೆರಗಾದ ನೃಪನು "ಎಲೆ ದ್ವಿಜನೆ! ನೀನೊರೆವ ಬೆಲೆ |
ಸರಿಯಾಗಿ ತೋರದೈ! ನೋಳ್ಪೆ ನಾನೀಗ ||
ಅರಗಿಳಿಯೆ ! ಕೊಡಬೇಕೆ ಸಾಸಿರ ಹಣವ ನಿನಗೆ? |
ಒರೆವುದೆನ್ನೊಳು" ಎಂದು ನುಡಿದನದರೊಡನೆ. || ೬ ||

"ಸಂದೇಹವೇನದಕೆ?—ಸಂದೇಹವೇನದಕೆ?" |
ಎಂದು ಭೂವರನು ಸಲೆ ತಲೆದೂಗುವಂತೆ ||
ಮುಂದಾಗಿ ಗಿಳಿಯುಲಿಯಲವನು ಸಂತಸಗೊಂಡು, |
ಒಂದು ಸಾವಿರ ಹಣವ ಕೊಡಿಸಿದನು ದ್ವಿಜಗೆ. || ೭ ||

ಇತ್ತಲರಮನೆಯೊಳಗೆ ಸರಸದಲಿ ನುಡಿಯಲದೆ |
ಉತ್ತರವನೀಯಲಾ ನೃಪ ಕೋಪಗೊಂಡು ||
"ಕತ್ತೆಯೊಲು ಚೀರುತಿಹ ಕೀರ! ನಿನ್ನನು ಪಡೆದೆ! |
ಮತ್ತನಲ್ಲವೆ ನಾನು ನೋಡುತಿರಲೀಗ?" || ೮ ||

"ಸಂದೇಹವೇನದಕೆ?—ಸಂದೇಹವೇನದಕೆ?" |
ಎಂದುಲಿಯಲಾ ಶುಕವು ತಿರುತಿರುಗಿ, "ಎಲವೊ, ||
ಮಂದಮತಿ! 'ಘಂಟೆಗೊಂದೇ ಸ್ವರ'ವದೆಂಬ ನುಡಿ. |
ಯಂದವನು ನೀನು ಸಾರ್ಥಕಗೊಳಿಸಿದಲ್ಲೊ!" || ೯ ||

ಬಳಿಕಲಾ ರಾಜನತಿ ತಾಳ್ಮೆಯಲಿ ನಗುನಗುತ |
"ಗಿಳಿಪಾಠವೆಂದರೇನೆಂಬುದನು ತಿಳಿದೆ! ||
ಕಲಿತ ಹಾಡಿನ ಸದರ್ಥವ ತಿಳಿಯದದನೆ ತಾ |
ನುಲಿವುದೆ"ನ್ನುತೆ ಗಿಳಿಯ ಹೊರಬಿಟ್ಟನಾಗ. || ೧೦ ||

---

## 20. ದೇವರಿಗೆ ಯಾರು ಮೇಲಾಗಿರುವರು?

|| ವೀರಚೌಪದಿ. ||

ಬಾಲನಾದರೆ ಏನು? ಮುದುಕನಾದರೆ ಏನು? |
ಕೀಳಾದರೇನು? ಮೇಲಾಗಿದ್ದರೇನು? ||
ಕೂಲಿಯವನಾದರೇಂ? ಧನಿಕನಾದರೆ ಏನು? |
ಮೇಲಾದ ಭಕ್ತಿಯಿರಲುತ್ತಮರು ಹರಿಗೆ. || ೧ ||



ಧ್ರುವನೇನು ಮುದುಕನೇ? ಶಬರಿಯೇನುತ್ತಮಳೆ? |
ಅವಲೋಕಿಸಲು ಕುಚೇಲನು ಧನಿಕನೇ? ||
ಅವರಿಗಾತನು ಮುಕ್ತಿಯನು ಕರುಣಿಸಿಹನೆನಲು, |
ತವಕಗೊಳುವನು ಭಕ್ತರನ್ನು ಪೊರೆಯಲ್ಕೆ. || ೨ ||

ಚಿಕ್ಕ ಮಗುವಾ ಧ್ರುವನ ಸದ್ಭಕ್ತಿ ಧ್ಯಾನಕ್ಕೆ |
ಮಿಕ್ಕಿದಾನಂದದಲಿ ತಾನಿದಿರುಗೊಂಡು; ||
'ತಕ್ಕು ತಕ್ಕುದೆ'ನುತ್ತೆ ತಕ್ಕೈಸಿ ಪ್ರೀತಿಯಲಿ |
ತಕ್ಕ ಪದವಿಯನು ಕೈಗಿಕ್ಕಿದನು ಹರಿಯು. || ೩ ||

ಜಾತಿಹೀನಳು, ಜ್ಞಾನ ಜ್ಯೋತಿಹೀನಳು, ನಾಡೆ |
ಖ್ಯಾತಿವಿರಹಿತಳಾದ ಮುದುಕಿಯಾ ಶಬರಿ ||
ಓತಿತ್ತ ಫಲಗಳನು ಕಾತರಿಸಿದುಚ್ಛಿಷ್ಟ |
ಸೀತಾಪತಿಯು ತಿಂದು, ಮುಕ್ತಿಯನ್ನಿತ್ತಂ || ೪ ||

ತೀವಿದ್ದ ಬಡತನದ ಬಾವುನೋವುಗಳ ಸಂ |
ಭಾವಿಸದೆ, ಭಾವಿಸುತೆ ಹರಿಯ ನಾಮವನು ||
ಸೇವಿಸಲು ಭಕ್ತಿಯಿಂದಾ ಬಡ ಕುಚೇಲನಿಗೆ |
ಶ್ರೀವರನು ಶಾಶ್ವತದ ಸಂಪದವನಿತ್ತಂ. || ೫ ||

O, 33, 1x PAI P
N21

Digitized by ROJA MUTHIAH RESEARCH LIBRARY

# ಕ್ಲಿಷ್ಟಪದಗಳ ಅರ್ಥ.

### ಪಾಠ ೧

ಸದ್ಗುಣಭೂಷ = ಸದ್ಗುಣದಿಂದೊಪ್ಪುವವನು
ತಿಳಿವಿನ ಬೆಳಕು = ಜ್ಞಾನವೆಂಬ ಪ್ರಕಾಶ.
ತೋಷ = ಸಂತೋಷ.
ಪರಮ = ಶ್ರೇಷ್ಠವಾದ.
ಪಥ = ಹಾದಿ.
ಸಂಗ = ಒಡನಾಟ.
ಕೂಪ = ಬಾವಿ.

೨

ಆಪದ = ಆಪತ್ತು.
ಅಧೋಗತಿ = ನರಕ.
ಅಕ್ಕಟಾ = ಅಕಟಾ, ಅಯ್ಯೋ.
ತನು = ದೇಹ.
ಘನ = ಗಾಂಭೀರ್ಯ; ಮರ್ಯಾದೆ.
ಮುನಿಸು = ಕೋಪ.
ಭೀಕರ = ಭಯಂಕರ.
ಸಖ್ಯ = ಸ್ನೇಹ; ಗೆಳೆತನ.

೩

ಅನುಚಿತದ = ಅಯೋಗ್ಯವಾದ.
ಬೋರುಗುಡಿ = ಉಸುಕು.
ಸತ್ಕಾರ್ಯ = ಒಳ್ಳೆಯ ಕೆಲಸ.

೪

ಪುರದ = ಊರಿನ
ನೆಗಳೆ = ಮೊಸಳೆ.

### ಪಾಠ ೪

ತರಿಯಲೆಂದು = ಕೊಲ್ಲಲಿಕ್ಕೆಂದು; ಕಡಿಯಲೆಂದು
ರಜಕ = ಅಗಸ; ಮಡಿವಾಳ.
ಬಾಳ = ಬಹಳ.
ಸಟೆ = ಸುಳ್ಳು.

೫

ಅರ್ಥ = ದ್ರವ್ಯ; ಹಣ.
ಕಾನನ = ಕಾಡು.
ಜೀನತನ = ಲೋಭತನ; ಕೃಪಣತ್ವ.
ಆಶಾಂಗನೆ = ಆಶೆಯೆಂಬುವ ಹೆಂಗಸು.
ಈವ = ಕೊಡುವ.
ವಿತ್ತ = ಹಣ; ಸಂಪತ್ತು.
ಮೇದಿನಿ = ಭೂಮಿ.

೬

ಕೆಂಬಣ್ಣ = ಕೆಂಪು ಬಣ್ಣ.
ಕೇಸರಿ = ಸಿಂಹ.
ಸಣ್ಣಿರುವೆ = ಸಣ್ಣ ಇರುವೆ.
ಅನಿತರೊಳೆ = ಅಷ್ಟರಲ್ಲೆ.
ತರುವಿಂದ = ಮರದಿಂದ.
ಪಥಿಕ = ದಾರಿಗ.
ವೇದನೆ = ನೋವು; ಯಾತನೆ.
ಚದುರತೆ = ಬುದ್ಧಿವಂತಿಕೆ.

೭

ಎಸಗುವಾ = ಮಾಡುವ.



### ಪಾಠ ೮

ಇಪ್ಪುದು = ಇರುವುದು.
ಬಪ್ಪುದು = ಬರುವುದು.
ಮೂಷಿಕ = ಇಲಿ.
ಖೇದ = ತೊಂದರೆ; ಪೀಡನೆ.

೯

ವಾಮಕರ = ಎಡಗೈ.
'ಬೆಕ್ಕಿನ ಕೊಂದರಾರೆನುತೆ' = 'ಬೆಕ್ಕಿನ ಕೊಂದವರಾರಮ್ಮ ಬೆಕ್ಕಿನ ಕೊಂದವರಾರ್ ಎಂದು.
ಕೌಪೀನ = ಲಂಗೋಟಿ.
ಪಾಲುಮಾರಿಕೆ = ಆಲಸ್ಯ.
ತಿರಿಕೆ = ಭಿಕ್ಷಾಟನೆ.

೧೦

ಕೂಗನು ಕೊಂಡು = ಅಳುವನ್ನು ನಟಿಸಿ.
ಪುರುಕ = ಕರುಣ.
ದುಗುಡ = ದುಃಖ
ನೀಗುವೆನು = ನಿವಾರಿಸುವೆನು; ಕಳೆವೆನು.
ಕನಕದಾ ಬಳೆ = ಚಿನ್ನದ ಬಳೆ.
ಅಳುಕದಿರು = ದುಃಖಿಸದಿರು; ಹೆದರಬೇಡ.
ಪೋಷಕ = ಉಡುಪು.
ಕುಹಕಿ = ಮೋಸಗಾರಿ; ಇಲ್ಲಿ ಕಳ್ಳ ಎಂಬರ್ಥ.
ವಿನೋದ = ಕುಶಾಲು.
ಹರಿದನು = ಓಡಿದನು.
ತಸ್ಕರ = ಕಳ್ಳ

### ಪಾಠ ೧೧

ತಾರೆ = ನಕ್ಷತ್ರ.
ಶೋಕ = ದುಃಖ.
ಮಾಕರುಣೆ = ಲಕ್ಷ್ಮೀ ಕಟಾಕ್ಷ.

ಲಕ್ಷ್ಮೀದೇವಿಯು ಬ್ರಹ್ಮನ ತಾಯಿ. ಸರಸ್ವತಿ (ವಿದ್ಯಾದೇವತೆ) ಯು ಬ್ರಹ್ಮನ ಹೆಂಡತಿ. ಆದ್ದರಿಂದ ಲಕ್ಷ್ಮಿಯು ಸರಸ್ವತಿಯ ಅತ್ತೆ.

ಮಾನವಗೆ = ಮನುಷ್ಯನಿಗೆ.
ಮಾನ = ಮರ್ಯಾದೆ.
ಸುರವೃಕ್ಷ = ಕಲ್ಪವೃಕ್ಷ.
ಪೌತ್ರ = ಮೊಮ್ಮಗ.

೧೨

ತೃಷೆ = ಬಾಯಾರಿಕೆ.
ರೋಷದಿಂದ = ಕೋಪದಿಂದ.
ವಾಯಸ = ಕಾಗೆ.

೧೩

ಬಲುಮೆ = ಶಕ್ತಿ.
ಪಾಮರ = ಮೂಢ.
ನೆಮ್ಮದಿ = ಸಮಾಧಾನ.
ಅಕ್ಕರೆ = ಪ್ರೀತಿ.
ಸಹಕಾರಿ = ಸಹಾಯಮಾಡುವವನು.

೧೪

ಅಡವಿ = ಕಾಡು.
ಸಂತಾಪ = ದುಃಖ.
ಚಿಗಿಚಿಗಿದು = ಹಾರಿಹಾರಿ.
ತೆಗಳು = ಹೀನಿಸು; ಹಳಿಯು.
ಒಡಲಿಗೆ = ಹೊಟ್ಟೆಗೆ.

Digitized by ROJA MUTHIAH RESEARCH LIBRARY

## ಪಾಠ ೧೬

ಮಣಿವೆ = ವಂದಿಸುತ್ತೇನೆ.

ಹೇಮ = ಭಂಗಾರ; ಚಿನ್ನ.

ಹಾರುವ, ದ್ವಿಜ, ವೈದಿಕ, ಭೂಸುರ = ಬ್ರಾಹ್ಮಣ.

ಅರಸುವರೆ = ಹುಡುಕುವರೆ.

ಪರಹಿತ = ಪರೋಪಕಾರ.

ರನ್ನ = ರತ್ನ.

ವ್ಯಾಘ್ರ = ಹುಲಿ.

ಕದ = ಬಾಗಿಲು.

## ೧೭

ತಳೆಯಬೇಕು = ಪಡೆಯಬೇಕು.

ಅನಿಬರನು = ಅನೇಕರನ್ನು.

ಮಸಣದಾ ಹೂ = ಶ್ಮಶಾನದ ಹೂ.

ಕುಸಿದು = ನೊಂದು.

## ೧೮

ಮಾರ್ಜಾಲ = ಬೆಕ್ಕು.

ಒಡತಿ = ಯಜಮಾನಿ.

ಕಂಠ, ಕಂಧರ = ಕೊರಳು; ಕುತ್ತಿಗೆ.

ನಡೆತಂದಿರಲು = ಬಂದಿರಲು.

ನಲವಿಂದ = ಸಂತೋಷದಿಂದ.

## ಪಾಠ ೧೯

ಬೋಧಿಸಿದ = ಕಲಿಸಿದನು.

ರಾಜಮಂದಿರ = ಅರಮನೆ.

ನುಡಿವಕ್ಕಿ, ಶುಕ = ಗಿಳಿ.

ಧಾರುಣೀಶ, ನೃಪ, ಭೂವರ, ರಾಜ = ಅರಸು.

ಮತ್ತನು = ಹುಚ್ಚನು.

ಉಲಿಯಲು = ಮಾತನಾಡಲು.

## ೨೦

ಅವಲೋಕಿಸಲು = ನೋಡಲು.

ಜ್ಞಾನಜ್ಯೋತಿ = ತಿಳಿವಿನ ಬೆಳಕು.

ಕಾತರಿಸದೆ = ದುಃಖಪಡದೆ; ಇಲ್ಲಿ ಬೇಸರ ಪಡದೆ ಎಂಬರ್ಥ.

ಉಚ್ಛಿಷ್ಟ = ಎಂಜಲು

ಸೀತಾಪತಿ = ಶ್ರೀ ರಾಮ.

ತೀವಿದ್ದ = ತುಂಬಿದ್ದ, ಇಲ್ಲಿ ಅಧಿಕವಾದ ಎಂಬರ್ಥ.

ಶ್ರೀವರ = ಶ್ರೀ ಕೃಷ್ಣ.

Digitized by ROJA MUTHIAH RESEARCH LIBRARY

ಈ ಪುಸ್ತಕದ ಪ್ರತಿಗಳು ಸಿಗುವ ಸ್ಥಳ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

BANGALORE

Digitized by RORI ... IAH RESEARCH LIBRARY

ಲೇಖಕ :

ಶಿರೋನಾಮೆ :

ವ. ಸಂ :

ಕ್ರ. ಸಂ :

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY